ನಡೆಸುತ್ತಿದ್ದ ಮಾನವ ಹಕ್ಕುಗಳ ಕಾರ್ಯಕರ್ತೆ ಇರೋಮ್ ಶರ್ಮಿಳಾ ತನ್ನ ಉಪವಾಸವನ್ನು ಕೊನೆಗೊಳಿಸಿ ಹೋರಾಟ ಮುಂದುವರಿಸಲು ನಿರ್ಧರಿಸಿದ್ದು ವರ್ಷದ ಅತ್ಯಂತ ಮುಖ್ಯ ಘಟನೆ.

ಭಾರತ– ಪಾಕಿಸ್ತಾನದ ಗಡಿಯಲ್ಲಿ ಉದ್ವಿಗ್ನತೆ ಈ ವರ್ಷವೂ ಮುಂದುವರಿದಿದೆ. ವರ್ಷದ ಆರಂಭದಲ್ಲೇ ಭಾರತದ ಪಠಾಣ್‌ಕೋಟ್ ಸೇನಾ ನೆಲೆಯ ಮೇಲೆ ಪಾಕ್ ಬೆಂಬಲಿತ ಉಗ್ರಗಾಮಿಗಳು ದಾಳಿ ನಡೆಸಿದ್ದು ದೊಡ್ಡ ಸುದ್ದಿಯಾಯಿತು. ಉಭಯ ದೇಶಗಳ ನಡುವೆ ಗುಂಡಿನ ಚಕಮಕಿ ಗಡಿಯಲ್ಲಿ ಸಾಮಾನ್ಯ ಎನ್ನುವಂತೆ ಈ ವರ್ಷವೂ ನಡೆದಿದೆ. ಆದರೆ ವರ್ಷದ ಕೊನೆಯಲ್ಲಿ ಕಾಶ್ಮೀರದ ಉರಿಯಲ್ಲಿ ಭಾರತೀಯ ಸೇನೆಯ ಕ್ಯಾಂಪ್ ಒಂದರ ಮೇಲೆ ದಾಳಿ ನಡೆಸಿ 17 ಸೈನಿಕರನ್ನು ಕೊಂದು ಹಾಕಿದ್ದು ಈ ವರ್ಷದ ಬಹುದೊಡ್ಡ ಭಯೋತ್ಪಾದಕ ದಾಳಿ. ಇದಕ್ಕೆ ಪ್ರತಿಯಾಗಿ ಭಾರತದ ಸೇನೆ ಪಾಕಿಸ್ತಾನದ ಪ್ರದೇಶದೊಳಕ್ಕೆ ಸೇನೆ ನುಗ್ಗಿಸಿ 'ಸರ್ಜಿಕಲ್ ಸ್ಟ್ರೈಕ್' ನಡೆಸಿ, ಆ ಕಡೆಯ 38 ಮಂದಿಯನ್ನು ಕೊಂದು ಹಾಕಿತು. ಹಲವು ಉಗ್ರಗಾಮಿ ನೆಲೆಗಳನ್ನು ಧ್ವಂಸಗೊಳಿಸಿತು. ಎರಡೂ ದೇಶಗಳ ಮಧ್ಯೆ ಯುದ್ಧವೇ ನಡೆಯಬಹುದು ಎನ್ನುವ ಭೀತಿಯನ್ನೂ ಈ ವರ್ಷ ಹುಟ್ಟುಹಾಕಿತು.

ಒಲಿಂಪಿಕ್ಸ್ ಹೊರತಾಗಿಯೂ ಭಾರತ ಕ್ರೀಡಾರಂಗದಲ್ಲಿ ಹಲವು ಸಾಧನೆಗಳನ್ನು ದಾಖಲಿಸಿದ ವರ್ಷವಿದು. ಬೆಂಗಳೂರಿನ 18ರ ಹರೆಯದ ಬಾಲೆ ಅದಿತಿ ಅಶೋಕ್, ವಿಶ್ವ ವೃತ್ತಿಪರ ಗಾಲ್ಫ್‌ನಲ್ಲಿ ಗಟ್ಟಿ ಹೆಜ್ಜೆ ಗುರುತುಗಳನ್ನು ದಾಖಲಿಸಿದರು. ಹೀರೊ ವುಮೆನ್ಸ್ ಇಂಡಿಯನ್ ಓಪನ್ ಪ್ರಶಸ್ತಿ ಗೆದ್ದ ಈಕೆ, ಮುಂದಿನ ವರ್ಷದ ಎಲ್‌ಪಿಜಿಎ ಕಾರ್ಡ್ ವಿಜೇತೆಯಾಗಿ ಇತಿಹಾಸ ನಿರ್ಮಿಸಿದ್ದಾರೆ. ರಿಯೊ ಒಲಿಂಪಿಕ್ಸ್‌ನಲ್ಲಿ 112 ವರ್ಷಗಳ ಬಳಿಕ ಗಾಲ್ಫ್ ಸ್ಪರ್ಧೆ ಸೇರ್ಪಡೆಯಾಗಿತ್ತು. ಅಲ್ಲಿ 41ನೇ ಸ್ಥಾನ ಪಡೆದಿದ್ದ ಅದಿತಿ, ಈ ವರ್ಷ ಹಲವು ಮಹತ್ವದ ಟೂರ್ನಿಗಳಲ್ಲಿ ಜಯಿಸಿದ್ದಾರೆ.



ಇರೋಮ್‌ಶರ್ಮಿಳಾ

ಭಾರತದ ಜೂನಿಯರ್ ಹಾಕಿ ತಂಡವೂ ದೇಶಕ್ಕೆ ಹೆಮ್ಮೆ ತಂದಿದೆ. ಈ ಹಿಂದೆ 2001ರಲ್ಲಿ ಭಾರತದ ಜೂನಿಯರ್ ಹಾಕಿ ತಂಡ ವಿಶ್ವಕಪ್ ಗೆದ್ದಿತ್ತು. 15 ವರ್ಷಗಳ ಬಳಿಕ ಈ ವರ್ಷ ಮತ್ತೆ ಜೂನಿಯರ್ ವಿಶ್ವ ಚಾಂಪಿಯನ್ ಎನ್ನಿಸಿಕೊಂಡದ್ದು ವಿಶೇಷ. ನಮ್ಮ ಕ್ರಿಕೆಟಿಗರಂತೂ ಹಲವು ದಾಖಲೆಗಳನ್ನು ಸೃಷ್ಟಿಸಿದ್ದು ವರ್ಷದ ಕೊನೆಗೆ ಸ್ವದೇಶದಲ್ಲಿ ಇಂಗ್ಲೆಂಡ್ ಟೆಸ್ಟ್ ತಂಡದ ವಿರುದ್ಧ 4–0 ಸರಣಿ ಜಯ ಗಳಿಸಿದ್ದು ದೊಡ್ಡ ಸುದ್ದಿಯಾಯಿತು.

ಭಾರತದ ಕ್ರಿಕೆಟ್ ಟೆಸ್ಟ್ ನಾಯಕ ಮಹೇಂದ್ರಸಿಂಗ್ ಧೋನಿ ಈ ವರ್ಷ ಕೀರ್ತಿಯ ಮತ್ತೊಂದು ಮಜಲನ್ನು ಏರಿದರು. ಅವರ ಜೀವನಗಾಥೆಯನ್ನು ಆಧಾರವಾಗಿಟ್ಟುಕೊಂಡು ಈ ವರ್ಷ ತೆರೆಗೆ ಬಂದ ಹಿಂದಿ ಸಿನಿಮಾ 'ಎಂ.ಎಸ್.ಧೋನಿ– ಅನ್‌ಟೋಲ್ಡ್ ಸ್ಟೋರಿ' ಒಟ್ಟು 133 ಕೋಟಿ ರೂಪಾಯಿ ಆದಾಯ ಗಳಿಸಿ ಬಾಕ್ಸಾಫೀಸಿನ ಎರಡನೆ ಅತ್ಯಂತ ಯಶಸ್ವೀ ಸಿನಿಮಾ ಎಂಬ ಕೀರ್ತಿ ಪಡೆಯಿತು. ಸಲ್ಮಾನ್ ಖಾನ್ ನಟಿಸಿದ 'ಸುಲ್ತಾನ್' ಮತ್ತು ರಜನಿಕಾಂತ್ ನಟಿಸಿದ 'ಕಬಾಲಿ' ಬಾಕ್ಸಾಫೀಸ್‌ನಲ್ಲಿ ದಾಖಲೆ ನಿರ್ಮಿಸಿದವು. 'ಉಡ್ತಾ ಪಂಜಾಬ್' ವರ್ಷದ ಅತ್ಯಂತ ವಿವಾದಾತ್ಮಕ ಚಿತ್ರ ಎಂದು ಹೆಸರು ಪಡೆಯಿತು.

ಸಾಧನೆಯಲ್ಲಿ ಏರಿಳಿತಗಳು ದೇಶವೊಂದರ ಇತಿಹಾಸದಲ್ಲಿ ಸಹಜವೇ. ಆದರೆ ವರ್ಷದ ಕೊನೆಗೆ ದೇಶದ ಜನರು ಎಷ್ಟು ಸಂತೋಷದಿಂದ ಇದ್ದಾರೆ ಎನ್ನುವುದು ಮುಖ್ಯ. ಪ್ರತಿವರ್ಷ ಜಗತ್ತಿನ 156 ದೇಶಗಳ 'ಸಂತೋಷದ ಸೂಚ್ಯಂಕ'ದ ಪಟ್ಟಿಯೊಂದು ತಯಾರಾಗುತ್ತದೆ. ದೇಶವೊಂದರ ಜನ ಒಟ್ಟಾರೆಯಾಗಿ ಎಷ್ಟು ಸಂತೋಷದಿಂದ ಇದ್ದಾರೆ ಎನ್ನುವುದನ್ನು ಅಳೆಯುವುದು ಈ ಪಟ್ಟಿಯ ಉದ್ದೇಶ. 2016ರಲ್ಲಿ ಭಾರತಕ್ಕೆ 156 ದೇಶಗಳ ಈ ಪಟ್ಟಿಯಲ್ಲಿ 118ನೇ ಸ್ಥಾನ ಸಿಕ್ಕಿದೆ. ಅಂದರೆ ನಾವು ತುಂಬ ಸಂತೋಷವಾಗಿಲ್ಲ ಎಂದೇ ಅರ್ಥ. ಅದರಲ್ಲೂ ಈ ಪಟ್ಟಿಯಲ್ಲಿ ಸೊಮಾಲಿಯಾ (76ನೇ ಸ್ಥಾನ), ಚೀನಾ (83), ಪಾಕಿಸ್ತಾನ (92), ಇರಾನ್ (105) ಬಾಂಗ್ಲಾ (110) ಮುಂತಾದ ದೇಶಗಳು ನಮಗಿಂತ ಮುಂದೆ ಇರುವುದು ಖಂಡಿತಾ ನಮಗೆ ದುಃಖ ತರುವ ಸಂಗತಿಯೇ. ಆಯಾ ದೇಶದ ಒಟ್ಟು ದೇಶೀಯ ಉತ್ಪಾದನೆ, ವ್ಯಕ್ತಿಗಳ ತಲಾ ಆಯುಷ್ಯ, ಸಾಮಾಜಿಕ ಬೆಂಬಲ ಮತ್ತು ಸ್ವಾತಂತ್ರ್ಯದ ಮಟ್ಟ– ಇವುಗಳನ್ನೆಲ್ಲ ಪರಿಶೀಲಿಸಿ ಈ 'ಸಂತೋಷದ ಸೂಚ್ಯಂಕ'ವನ್ನು ಕಂಡು ಹಿಡಿಯಲಾಗುತ್ತದೆ. ಈ ಪಟ್ಟಿಯಲ್ಲಿ ಸದಾ ಮೊದಲ ಮೂರು ಸ್ಥಾನಗಳಲ್ಲಿ ಒಂದನ್ನು ಗಳಿಸುವ ಸ್ವಿಝರ್ಲ್ಯಂಡಿನ ಪ್ರಜೆಗಳಂತೆ ನಾವು ಆಗುವುದು ಯಾವಾಗ?

ಕೊನೆಗೂ ಆಯಾ ದೇಶದ ಆರ್ಥಿಕತೆಯೇ ಒಂದು ದೇಶವನ್ನು ಸುಖವಾಗಿ ಇಡುವುದು ಎನ್ನುವ ಮಾತಿನ ಬಗ್ಗೆ ಭಿನ್ನಮತ ಇರಬಹುದು. ಆದರೆ ಭೌತಿಕ ದಾರಿದ್ರ್ಯ ಯಾವುದೇ ದೇಶದಲ್ಲಿ ಅಸಮಾನತೆಯನ್ನು ಸೃಷ್ಟಿಸುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಅಸಮಾನತೆಯ ಕಂದರ ಅತ್ಯಂತ ಹೆಚ್ಚಿರುವ ದೇಶವಾಸಿಗಳು ಸುಖವಾಗಿರಲು ಸಾಧ್ಯವಿಲ್ಲ. ನಮ್ಮ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಿಗೆ ಲಕ್ಷಗಟ್ಟಳೆ ಕೋಟಿ ರೂಪಾಯಿಗಳನ್ನು ವಂಚಿಸಿರುವ ಉದ್ಯಮಪತಿಗಳನ್ನು ಜೈಲುಗಳ ಹಿಂದೆ ಕಳುಹಿಸುವ ಇಚ್ಛಾಶಕ್ತಿ ಇಲ್ಲವಾದಲ್ಲಿ ಆರ್ಥಿಕತೆಯನ್ನು ಆರೋಗ್ಯಪೂರ್ಣವಾಗಿ ಕಟ್ಟುವುದು ಕಷ್ಟ. ಈ ವರ್ಷ ಬ್ಯಾಂಕುಗಳಿಗೆ ಅಪಾರ ಪ್ರಮಾಣದ ಹಣವನ್ನು ವಂಚಿಸಿ, ಸುರಕ್ಷಿತವಾಗಿ ದೇಶ ಬಿಟ್ಟು ಹೋದ ಉದ್ಯಮಿ ವಿಜಯ ಮಲ್ಯ ಅವರ ಪ್ರಕರಣವನ್ನೇ ಗಮನಿಸಿ. ಇಂತಹ ಪ್ರಕರಣಗಳು ಹೆಚ್ಚಾದಷ್ಟೂ ಆರ್ಥಿಕ ಕ್ಷೇತ್ರದ ಸರ್ಕಾರಿ ಕ್ರಮಗಳ ಕುರಿತ ಅಪನಂಬಿಕೆ ಹೆಚ್ಚಾಗುತ್ತದೆ. 2016 ವರ್ಷದಲ್ಲಿ ನಾವು ಕಲಿಯಬಹುದಾದ ಬಹುದೊಡ್ಡ ಪಾಠವಿದು.

## ಕಣ್ಮರೆಯಾದ ಸಂಸ್ಕೃತಿಪ್ರಿಯರು



ಗಾಯಕ ಬಾಲಮುರಳಿಕೃಷ್ಣ



ಚಿತ್ರ ನಿರ್ದೇಶಕ ಗೀತಪ್ರಿಯ



ಮೃಣಾಲಿನಿ ಸಾರಾಭಾಯ್



ಕವಿ ಅಕಬರ ಅಲಿ



ಸಾಹಿತಿ ಓಎನ್‌ವಿ ಕುರುಪ್



ಪತ್ರಕರ್ತ ಚೋ ರಾಮಸ್ವಾಮಿ